ಸಲಹೆಯಂತೆ ಅದನ್ನೂ ಡಿಸ್‌ಕನೆಕ್ಟ್ ಮಾಡಿದ್ದಾಯಿತು. ಅಭ್ಯಾಸಬಲದಿಂದ ಲೈಟ್ ಹಾಕಿದರೆ ಜೇನ್ನೊಣಗಳ ನಿದ್ರಾಭಂಗ ಆಗಬಾರದಲ್ಲ.

ಬೇರೊಬ್ಬರ ಸಂಸಾರವನ್ನು ಕದ್ದು ಮುಚ್ಚಿ ನೋಡಬಾರದು. ನಾನು ನೇರಾನೇರ ಕಿಟಕಿಯ ಬಳಿಯೇ ಸ್ಟೂಲ್ ಹಾಕಿ ಕೂತು ಈ ಜೇನಿನ ಸಂಸಾರವನ್ನು ನೋಡತೊಡಗಿದೆ. ನನ್ನ ಕಿಟಕಿಯಿಂದ ಅದರ ಸಂಸಾರ ಒಂದು ಮೊಳದಷ್ಟು ದೂರ ಅಷ್ಟೆ. ಆರಂಭದಲ್ಲಿ ಎಲ್ಲ ಎರ್ರಾಬಿರ್ರಿ ಕೂತಿದ್ದವು, ಅಫ್ಘಾನಿಸ್ತಾನದ ಭೂಪಟದ ಥರಾ. ಅಥವಾ ತಲೆಕೆಳಗಾಗಿ ನೇತಾಡುವ ಕರಡಿಯ ಥರಾ.

ಪಾಪ, ಇವೆಲ್ಲ ಎಲ್ಲಿಂದ ಬಂದವೊ ಏನೊ. ಯಾರೋ ದೂರದ ಯಾವುದೋ ಅರಣ್ಯಕ್ಕೆ ಬೆಂಕಿ ಹಚ್ಚಿರಬೇಕು. ನಿರಾಶ್ರಿತರಾಗಿ ಇಲ್ಲಿಗೆ ಬಂದಿರಬೇಕು.

